## ನಿಮ್ಮೊಡನೆ

# ಸಿನಿಮಾ ನೈತಿಕತೆಗೆ ಅಗ್ನಿಪರೀಕ್ಷೆ !

> ಇವತ್ತಿನ ಕನ್ನಡ ಸಿನಿಮಾ ಕಥನಗಳು ಗಾಬರಿ ಹುಟ್ಟಿಸುವಂತಿವೆ. ಮನರಂಜನೆಯ ಹೆಸರಿನಲ್ಲಿ ರೌಡಿಸಂ ವಿಜೃಂಭಣೆ ಇಲ್ಲವೇ ಸವಕಳಿ ಪ್ರೇಮಕಥನಗಳ ಆಚೆಗೆ ಚಿತ್ರರಂಗ ಯೋಚಿಸುತ್ತಿಲ್ಲ.

ಸಮಕಾಲೀನ ಕನ್ನಡ ಸಿನಿಮಾದ ಅಭಿರುಚಿಯ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿ ರಾಮ ಮೋಹನ ರೆಡ್ಡಿ ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಪೂರಕವಾಗಿ ಹಿರಿಯ ವಕೀಲೆ ಹೇಮಲತಾ ಮಹಿಷಿ ಅವರು ಸಿನಿಮಾಗಳಲ್ಲಿ ಅಶ್ಲೀಲತೆ ಎಲ್ಲೆ ಮೀರುತ್ತಿರುವುದರ ಬಗ್ಗೆ ಬೆಟ್ಟು ಮಾಡಿದ್ದಾರೆ. ಇವರಿಬ್ಬರ ಮಾತುಗಳು, ಚಲನಚಿತ್ರಕ್ಕೆ ಸಾಮಾಜಿಕ ಜವಾಬ್ದಾರಿ ಇರಬೇಕು ಎನ್ನುವ ನಂಬಿಕೆಗೆ ಪುಷ್ಟಿ ಕೊಡುವಂತಿವೆ.

ಸಿನಿಮಾದಿಂದ ಸಮಾಜ ಸುಧಾರಣೆ ಸಾಧ್ಯವಿಲ್ಲ ಎನ್ನುವ ಮಾತು ಈಚಿನ ದಿನಗಳಲ್ಲಿ ಪದೇಪದೇ ಕೇಳಿಬರುತ್ತಿದೆ. ಕನ್ನಡ ಚಿತ್ರರಂಗದ ತಾರಾ ವರ್ಚಸ್ಸಿನ ಬಹುತೇಕ ಕಲಾವಿದರು ಮತ್ತು ನಿರ್ದೇಶಕರಿಗೆ ದೃಶ್ಯ ಮಾಧ್ಯಮದಿಂದ ಸಾಮಾಜಿಕ ಬದಲಾವಣೆ ಸಾಧ್ಯ ಎನ್ನುವ ಬಗ್ಗೆ ನಂಬಿಕೆಯಿಲ್ಲ. ರಾಜಕುಮಾರ್ ಅವರ ಚಿತ್ರಗಳನ್ನು ನೋಡಿ ಕೃಷಿಗೆ ಮರಳಿದವರು, ಸಂಬಂಧಗಳನ್ನು ಗಟ್ಟಿಗೊಳಿಸಿಕೊಂಡವರು, ವ್ಯಸನಗಳಿಂದ ಮುಕ್ತರಾದವರು– ಇಂಥ ದೃಷ್ಟಾಂತಗಳು ಈಗ ಸಿನಿಮಾ ಇತಿಹಾಸದ ಭಾಗ ಮಾತ್ರ. ಈಗೇನಿದ್ದರೂ, ಕತ್ತು ಕೊಯ್ಯುವ ಅಥವಾ ಹೆಣ್ಣುಮಕ್ಕಳ ಶೀಲಹರಣ ಮಾಡುವಂತಹ ಘಟನೆಗಳಲ್ಲಿ ಮಾತ್ರ ಸಿನಿಮಾದ ಪರಿಣಾಮವನ್ನು ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಸಿನಿಮಾ ಸಾಗುತ್ತಿರುವ ದಿಕ್ಕುದೆಸೆಯ ಬಗ್ಗೆ ನ್ಯಾಯಮೂರ್ತಿಗಳು ಎತ್ತಿರುವ ಪ್ರಶ್ನೆಗಳು ಔಚಿತ್ಯಪೂರ್ಣವಾಗಿವೆ.

ಸಿನಿಮಾಗಳಿಂದ ಸಮಾಜ ಸುಧಾರಣೆ ಸಾಧ್ಯವಾಗಬೇಕು. ಇದರ ಬದಲಾಗಿ, ಸಿನಿಮಾಗಳು ಯುವಕರಲ್ಲಿ ದಾಳಿಕೋರ ಮನಸ್ಥಿತಿಯನ್ನು ತುಂಬುತ್ತಿವೆ ಎನ್ನುವುದು ಹೇಮಲತಾ ಮಹಿಷಿ ಅವರ ಅನಿಸಿಕೆ. ಒಳ್ಳೆಯ ಸಿನಿಮಾಕ್ಕೆ ಮಾದರಿಯಾಗಿ ರಾಜಕುಮಾರ್ ಮತ್ತು ವಿಷ್ಣುವರ್ಧನ್ ಕಾಲದ ಸಿನಿಮಾಗಳನ್ನು ಉದಾಹರಣೆಯಾಗಿ ನೀಡುವ ಅವರು, ಪ್ರಸ್ತುತ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಲೈಂಗಿಕ ದಾಳಿಗಳ ಹಿಂದೆ ಸಿನಿಮಾದ ಪರಿಣಾಮವೂ ಇರುವುದನ್ನು ಸ್ಪಷ್ಟಮಾತುಗಳಲ್ಲಿ ಹೇಳಿದ್ದಾರೆ.

ಗಂಡಿನ ಮೃಗೀಯ ವರ್ತನೆಗೆ ಸಿನಿಮಾವನ್ನು ಜವಾಬ್ದಾರಿಯನ್ನಾಗಿಸುವ ವಾದದಲ್ಲಿ ಕೊಂಚ ಸತ್ಯವಿದೆ. ಹೆಣ್ಣನ್ನು ಪೀಡಿಸುವ ಪುರುಷ ಗುಣ ಸಿನಿಮಾ ಇಲ್ಲದ ಕಾಲದಲ್ಲೂ ವಿಜೃಂಭಣಾವಸ್ಥೆಯಲ್ಲೇ ಇದ್ದುದನ್ನು ಗಮನಿಸಬೇಕು. ಮಹಾಯುದ್ಧಗಳ ಕಾಲದಲ್ಲಿ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾದ, ‘ಕಂಫರ್ಟ್ ವುಮನ್’ ಎಂದು ಕರೆಸಿಕೊಂಡಿದ್ದ ನತದೃಷ್ಟ ಹೆಣ್ಣುಗಳು ನಮ್ಮ ನಡುವೆ ಇದ್ದಾರೆ. ಮಾನವೀಯತೆಗೆ ಕಪ್ಪುಮಸಿ ಬಳಿಯುವ ಇಂತಹ ಪ್ರಕರಣಗಳು ಪ್ರಸ್ತುತ ಎದ್ದು ಕಾಣಿಸುತ್ತಿರುವುದಕ್ಕೆ ಕಾರಣ ಮಾಧ್ಯಮಗಳ ಪ್ರಭಾವಳಿ. ಹೀಗಾಗಿ, ಪ್ರಸ್ತುತ ಹೆಣ್ಣಿನ ಮೇಲಾಗುತ್ತಿರುವ ಆಕ್ರಮಣಕ್ಕೆ ಸಿನಿಮಾವನ್ನಷ್ಟೇ ಗುರಿ ಮಾಡುವುದು, ಸಮಸ್ಯೆಯನ್ನು ಸರಳಗೊಳಿಸಿದಂತಾಗುತ್ತದೆ. ಆದರೆ, ಹೆಣ್ಣಿನ ಚಿತ್ರಣ ಚಲನಚಿತ್ರ ಮಾಧ್ಯಮದಲ್ಲಿ ಕೀಳು ಮಟ್ಟದಲ್ಲಿದೆ ಎನ್ನುವುದು ಸರಿಯಾಗಿಯೇ ಇದೆ.

ಇವತ್ತಿನ ಬಹುತೇಕ ಸಿನಿಮಾಗಳ ನಾಯಕಿಯರಿಗೆ ಸ್ವಂತ ವ್ಯಕ್ತಿತ್ವ ಎನ್ನುವುದೇ ಇಲ್ಲ. ಚಿತ್ರದ ನಾಯಕನ ಪುರುಷತ್ವದ ಉತ್ತೇಜಕವಾಗಿ ಹಾಗೂ ಪ್ರೇಕ್ಷಕರ ಕಾಮನೆಗಳನ್ನು ಕೆರಳಿಸುವವಳಾಗಿ ನಾಯಕಿಯ ಪಾತ್ರ ಚಿತ್ರಿತಗೊಳ್ಳುವುದೇ ಹೆಚ್ಚು. ಭೋಗದ ಒಂದು ಸರಕಾಗಿ ಹೆಣ್ಣನ್ನು ನೋಡುವ ಈ ಪರಿಕಲ್ಪನೆ ನೂರು ವರ್ಷಗಳ ಪ್ರಾಯದ ಸಿನಿಮಾಗಳಲ್ಲಿ ಕೊಂಚ ಢಾಳಾಗಿಯೇ ಕಾಣಿಸುತ್ತಿದೆ.

ಇವತ್ತಿನ ಕನ್ನಡ ಸಿನಿಮಾ ಕಥನಗಳು ಗಾಬರಿ ಹುಟ್ಟಿಸುವಂತಿವೆ. ಮನರಂಜನೆಯ ಹೆಸರಿನಲ್ಲಿ ರೌಡಿಸಂ ವಿಜೃಂಭಣೆ ಇಲ್ಲವೇ ಸವಕಳಿ ಪ್ರೇಮಕಥನಗಳ ಆಚೆಗೆ ಚಿತ್ರರಂಗ ಯೋಚಿಸುತ್ತಿಲ್ಲ. ಸಾಹಿತ್ಯ ಕೃತಿಗಳನ್ನು ಆಧರಿಸಿ ಸಿನಿಮಾ ಮಾಡುವ ಬದಲಿಗೆ ರೀಮೇಕ್ ಬಗೆಗಿನ ಉತ್ಸಾಹಿಗಳೇ ಚಿತ್ರರಂಗದ ಮುಂಚೂಣಿಯಲ್ಲಿದ್ದಾರೆ. ರಂಜನೆಯ ಹೆಸರಿನಲ್ಲಿ ಕಾಮನೆಗಳನ್ನು ಬಿಕರಿ ಮಾಡುವ ವ್ಯಾಪಾರ ನಡೆಯುತ್ತಿದೆ. ‘ಸತ್ಯಘಟನೆ ಆಧಾರಿತ’ ಎನ್ನುವ ಹೆಸರಿನಲ್ಲಿ ಉನ್ಮಾದದ ಸಿನಿಮಾಗಳು ಸಾಲು ಸಾಲು ತಯಾರಾಗುತ್ತಿರುವುದನ್ನು ನೋಡಿದರೆ, ಹಸಿಬಿಸಿ ಚಿತ್ರಗಳ ಪುನರುತ್ಥಾನಕ್ಕೆ ಕೆಲವರು ಟೊಂಕ ಕಟ್ಟಿ ನಿಂತಂತಿದೆ. ಇಂಥ ಸಂದರ್ಭದಲ್ಲಿ ಗುಣಮಟ್ಟದ ಸಿನಿಮಾಗಳನ್ನು ಹೇಗೆ ನಿರೀಕ್ಷಿಸುವುದು?

ದಂಡುಪಾಳ್ಯ ಸರಣಿ ಹಂತಕರ ಕುರಿತ ಸಿನಿಮಾ ತೆರೆಕಂಡ ನಂತರ ಅದೇ ಬಗೆಯ ಅಪರಾಧಗಳು ಘಟಿಸಿದ ಬಗ್ಗೆ ಪೊಲೀಸ್ ಇಲಾಖೆ ಗಾಬರಿಗೊಂಡಿತ್ತು. ಇದೀಗ ವಿಕೃತ ಕಾಮಿಯೊಬ್ಬನ ಬದುಕಿನ ಚಿತ್ರಣದ ಕಥನ ತೆರೆಕಾಣಲು ಸಿದ್ಧವಾಗಿದೆ. ಈ ವೈರುಧ್ಯಗಳ ಸಂದರ್ಭದಲ್ಲಿ ನ್ಯಾಯಮೂರ್ತಿ ಮತ್ತು ವಕೀಲರ ಮಾತುಗಳು ಚಿತ್ರೋದ್ಯಮದ ಬಗೆಗಿನ ವಿಮರ್ಶೆಯ ಎಚ್ಚರದ ಮಾತುಗಳಂತಿವೆ. ಈ ಎಚ್ಚರ ಉದ್ಯಮದ ಒಳಗೂ ಸಾಧ್ಯವಾಗಬೇಕು. ಚಿತ್ರೋದ್ಯಮದ ಹಿರಿಯರು ಹಾಗೂ ಹೊಸ ಪೀಳಿಗೆಯ ಸೃಜನಶೀಲ ಮನಸ್ಸುಗಳು ಸಿನಿಮಾದ ನೈತಿಕತೆಯ ಕುರಿತಾದ ಚರ್ಚೆಗಳನ್ನು ರೂಪಿಸಬೇಕಾಗಿದೆ. ಇಂಥ ಚರ್ಚೆಗಳ ಬೆಳಕಿನಲ್ಲಿ ಸಶಕ್ತ ಕನ್ನಡ ಸಿನಿಮಾ ಮೂಡಿಬರಬೇಕಿದೆ.

**■ ರಘುನಾಥ ಚ.ಹ.**



ಈಶ್ವರ